ದಿಃ 08-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಆರ್.ಸಿ ವಾದಿಗಳ ಪರ ವಕೀಲರಿಂದಃ

ನನ್ನ ಊರಿನಲ್ಲಿ ರುದ್ರಯ್ಯ ಎಂಬುವವರು ಇದ್ದರು ಹಾಗೂ ನನಗೆ ಅವರು ಪರಿಚಯವಿದ್ದರು. ಸದರಿ ರುದ್ರಯ್ಯರವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾವು ಚಿಕ್ಕಮಕ್ಕಳಾಗಿದ್ದ ಕಾರಣ ಅವರು ಏನು ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರುದ್ರಯ್ಯರವರಿಗೆ 4 ಜನ ಹೆಂಡತಿಯರಿದ್ದರು ಎಂದರೆ ಗೊತ್ತಿಲ್ಲ. ಸದರಿ ರುದ್ರಯ್ಯರವರ ಹೆಂಡತಿಯರ ಹೆಸರು ಗೌರಮ್ಮ, ಸಿದ್ದಮ್ಮ, ವೀರಮ್ಮ ಹಾಗೂ ಶಾಂತಮ್ಮ ಎಂದರೆ ಸಾಕ್ಷಿ ಅವರ ಪತ್ನಿಯ ಹೆಸರು ಸರ್ವಮಂಗಳಮ್ಮ ಎಂಬುದು ಮಾತ್ರ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಸದರಿ ಸರ್ವಮಂಗಳಮ್ಮರವರ ಸ್ವಂತ ಊರು ಯಾವುದೆಂಬುದು ನನಗೆ ಗೊತ್ತಿಲ್ಲ. ರೇಣುಕಾರಾಧ್ಯರವರು ನನಗೆ ಪರಿಚಯವಿರುತ್ತಾರೆ. ಸದರಿ ರೇಣುಕಾರಾಧ್ಯರವರು ಸರ್ವಮಂಗಳಮ್ಮರವರ ಮಗ. ರುದ್ರಯ್ಯರವರ ಕೊನೆಯ ಹೆಂಡತಿಯಾದ ಶಾಂತಮ್ಮರವರ ಮಗನೇ ಸದರಿ ರೇಣುಕಾರಾಧ್ಯ ಎಂದರೆ ಗೊತ್ತಿಲ್ಲ. ಸದರಿ ಸರ್ವಮಂಗಳಮ್ಮರವರು ಮಧುಗಿರಿ ತಾಲ್ಲೂಕಿನ ಕೊಡಗೇನಹಳ್ಳಿ ಹೋಬಳಿಯ ಬೂದೇನಹಳ್ಳಿ ಗ್ರಾಮದವರು ಎಂದರೆ ಸರಿಯಲ್ಲ. ಸರ್ವಮಂಗಳಮ್ಮರವರ ಮಗಳನ್ನು ಸದರಿ ಶಾಂತಮ್ಮನ ಮಗನಾದ ರೇಣುಕಾರಾಧ್ಯರವರು ಮದುವೆಯಾದರು ಎಂದರೆ ಗೊತ್ತಿಲ್ಲ. ಸರ್ವಮಂಗಳಮ್ಮರವರು ರೇಣುಕಾರಾಧ್ಯರವರ ಅತ್ತೆ ಎಂದರೆ ಗೊತ್ತಿಲ್ಲ.

ರುದ್ರಯ್ಯನ ಮೊದಲನೇ ಹೆಂಡತಿಯಾದ ಗೌರಮ್ಮನಿಗೆ ಎಷ್ಟು ಜನ ಮಕ್ಕಳು ಎಂಬುದು ನನಗೆ ಗೊತ್ತಿಲ್ಲ. ಸದರಿ ಗೌರಮ್ಮರಿಗೆ ಎಂ.ಶಿವರುದ್ರಯ್ಯ ಎಂಬ ಒಬ್ಬ ಮಗ ಇದ್ದಾನೆ ಎಂದರೆ ಗೊತ್ತಿಲ್ಲ. ನಾನು ಸದರಿ ಶಿವರುದ್ರಯ್ಯರವರನ್ನು ನೋಡಿದ್ದೇನೆ. ನಾನು ಸುಮಾರು 40 ವರ್ಷಗಳ ಹಿಂದೆ ಸದರಿ ಶಿವರುದ್ರಯ್ಯರವರನ್ನು ನೋಡಿದ್ದೆನು. ಸದರಿ ಶಿವರುದ್ರಯ್ಯರವರು ಯಾವಾಗ ತೀರಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸದರಿ ಶಿವರುದ್ರಯ್ಯರವರ ಗಂಡು ಮಕ್ಕಳೇ ಈ ದಾವೆಯ ವಾದಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಗಳನ್ನು ನಾನು ಕಳೆದ ದಿನಾಂಕದಂದು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿದೆನು ಎಂದು ನುಡಿಯುತ್ತಾರೆ.

ವಾದಿಗಳು ಈ ದಾವೆಯನ್ನು ಏನು ಪರಿಹಾರವನ್ನು ಕೋರಿ ಹೂಡಿದ್ದಾರೆಂಬುದು ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯನ್ನು ನನ್ನ ವಿರುದ್ಧ ಸರ್ವೆ ನಂ. 199/ಬಿ2 ರ ಜಮೀನಿಗೆ ಸಂಬಂಧಪಟ್ಟಂತೆ ಹೂಡಿರುತ್ತಾರೆ. ಸದರಿ ಜಮೀನಿನ ಒಟ್ಟು ವಿಸ್ತೀರ್ಣ 26 ಗುಂಟೆ ಆಗಿರುತ್ತದೆ.

ಸದರಿ ಜಮೀನಿನ ಪೂ-ಮಲ್ಲೇಶಪ್ಪನ ಜಮೀನು, ಪ-ದೊಡ್ಡರಂಗಪ್ಪರವರ ಜಮೀನು, ಉ-ರಂಗದಾಮಯ್ಯರವರ ಜಮೀನು ಹಾಗೂ ದ-ರಾಜ್ ಕಾಲುವೆ.

ವಾದಿಗಳು ಮತ್ತೊಂದು ಜಮೀನಿಗೆ ಸಂಬಂಧಪಟ್ಟಂತೆ ನನ್ನ ವಿರುದ್ಧ ಈ ದಾವೆಯನ್ನು ಹೂಡಿದ್ದು ಆ ಮತ್ತೊಂದು ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಮತ್ತೊಂದು ಜಮೀನಿನ ವಿಸ್ತೀರ್ಣ ಎಷ್ಟಿದೆ ಎಂಬ ಪ್ರಶ್ನೆಗೆ ಸಾಕ್ಷಿ ಮೊದಲು 26 ಗುಂಟೆ ಎಂದು ಹೇಳಿ ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಎರಡು ಜಮೀನುಗಳು ನೀರಾವರಿ ಜಮೀನುಗಳಾಗಿರುತ್ತವೆ. ಸದರಿ ಜಮೀನುಗಳಲ್ಲಿ ನನ್ನ ತಾಯಿಯ ಜೀವಿತಾವಧಿಯಲ್ಲಿ ಬೋರ್ವೆಲ್ ಅನ್ನು ಅಳವಡಿಸಿದ್ದೇವೆ. ಸದರಿ ಮತ್ತೊಂದು ಜಮೀನಿನ ಪೂ-ರಾಜ್ ಕಾಲುವೆ, ಪ-ಲಕ್ಕಣ್ಣನ ಜಮೀನು, ಉ-ಲಕ್ಕಣ್ಣನ ಜಮೀನು ಹಾಗೂ ದ-ನನ್ನ ಜಮೀನು. ದಕ್ಷಿಣ ದಿಕ್ಕಿಗಿರುವ ಜಮೀನನ್ನು ನಾನು ರಂಗದಾಮಯ್ಯರವರಿಂದ ಕೊಂಡುಕೊಂಡಿರುತ್ತೇನೆ. ಬೋರ್ವೆಲ್ ಅನ್ನು ದಾವಾ ಐಟಂ ನಂ.2 ಮತ್ತು 3 ರ ಪೈಕಿ ಯಾವ ಜಮೀನಿನಲ್ಲಿ ಅಳವಡಿಸಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ಮತ್ತು 3 ರ ಜಮೀನುಗಳಲ್ಲಿ ಒಂದು ಬೋರ್ವೆಲ್ ಇದೆ ಎಂಬ ವಿಚಾರವನ್ನು ಈ ದಾವೆಯನ್ನು ಹೂಡಿದ ನಂತರ ನನ್ನ ವಕೀಲರಿಗೆ ತಿಳಿಸಿರುವುದಿಲ್ಲ. ಸದರಿ ಬೋರ್ವೆಲ್ ಅನ್ನು ಅಳವಡಿಸಿ ಸುಮಾರು ವರ್ಷಗಳು ಕಳೆದಿವೆ. ಸದರಿ ಬೋರ್ವೆಲ್ ಅನ್ನು ಅಳವಡಿಸಲು ಸರ್ಕಾರದಿಂದ ಯಾವುದೇ ಆರ್ಥಿಕ ನೆರವನ್ನು ಪಡೆದಿರುವುದಿಲ್ಲ, ನಮ್ಮ ವೈಯಕ್ತಿಕ ಖರ್ಚಿನಿಂದ ಅಳವಡಿಸಿರುತ್ತೇವೆ. ಸದರಿ ಬೋರ್ವೆಲ್ ಅಳವಡಿಸಲು ಹಣವನ್ನು ಖರ್ಚು ಮಾಡಿದೆವು ಎಂದು ತೋರಿಸುವ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಬೋರ್ವೆಲ್ ಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದು ತೋರಿಸುವ ದಾಖಲೆಗಳನ್ನೂ ಸಹ ಈ ದಾವೆಯಲ್ಲಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಐಟಂ ನಂ.2 ಮತ್ತು 3 ರ ಪಹಣಿಗಳು ಪ್ರಸ್ತುತವಾಗಿ ಯಾರ ಹೆಸರಿನಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿಯ ಹೆಸರಿನಲ್ಲಿರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡರು. ನನ್ನ ತಾಯಿ ಹೆಸರು ಗಂಗಮ್ಮ. ನನ್ನ ತಾಯಿಗೆ 3 ಜನ ಮಕ್ಕಳು, ಅವರ ಹೆಸರು ದೊಡ್ಡರಂಗಪ್ಪ, ಚಿಕ್ಕರಂಗಪ್ಪ ಮತ್ತು ಚಿಕ್ಕಪ್ಪಯ್ಯ. ಸಾಕ್ಷಿಯು ಮುಂದುವರೆದು ದೊಡ್ಡರಂಗಪ್ಪರವರು ತೀರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದೊಡ್ಡರಂಗಪ್ಪನಿಗೆ ಇಬ್ಬರು ಗಂಡು ಮಕ್ಕಳು-ರಂಗಶಾಮಪ್ಪ ಮತ್ತು ಸೀನಪ್ಪ ಹಾಗೂ ಇಬ್ಬರು ಹೆಣ್ಣು ಮಕ್ಕಳು-ಕೆಂಚಮ್ಮ ಮತ್ತು ಸುಖನ್ಯಾ. 11 ನೇ ಪ್ರತಿವಾದಿಯು ಇನ್ನೂ ಬದುಕಿದ್ದಾರೆ.

ದಾವಾ ಐಟಂ ನಂ.2 ಮತ್ತು 3 ರಲ್ಲಿ ದೊಡ್ಡರಂಗಪ್ಪನ ಮಕ್ಕಳು, ಚಿಕ್ಕರಂಗಪ್ಪ ಹಾಗೂ ನಾನು ಉಳುಮೆ ಮಾಡುತ್ತಿದ್ದೇವೆ. ದಾವಾ ಐಟಂ ನಂ.2 ಮತ್ತು 3 ರಲ್ಲಿ ನಾವು ಜಂಟಿಯಾಗಿ ಉಳುಮೆ ಮಾಡುತ್ತಿದ್ದು ಅವುಗಳನ್ನು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ. ಸರ್ವಮಂಗಳಮ್ಮರವರಿಂದ ನನ್ನ ತಾಯಿಯಾದ ಗಂಗಮ್ಮರವರು ಜಮೀನುಗಳನ್ನು ಕೊಂಡುಕೊಂಡರು. ಸುಮಾರು 28 ವರ್ಷಗಳ ಹಿಂದೆ ನನ್ನ ತಾಯಿಯು ಸದರಿ ಜಮೀನುಗಳನ್ನು ಖರೀದಿಸಿದರು. ಸರ್ವಮಂಗಳಮ್ಮರವರ ಹೆಸರಿನಲ್ಲಿದ್ದ ದಾವಾ ಐಟಂ ನಂ.2 ಮತ್ತು 3 ರ ಹಳೇ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಐಟಂ ನಂ.2 ಮತ್ತು 3 ಕ್ಕೆ ಸಂಬಂಧಪಟ್ಟ 1965 ರಿಂದ 2000 ನೇ ಇಸವಿಯ ಹಳೇ ಕೈಬರಹದ ಪಹಣಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು